

ಹೋಗುತ್ತಿರುವ ಕುಟುಂಬಗಳಲ್ಲಿಯಂತೂ ಹೆಣ್ಣಿನ ವೃತ್ತಿಜೀವನದ ದೃಷ್ಟಿಯಿಂದ ಇಬ್ಬರು ಮಕ್ಕಳನ್ನು ಹೆತ್ತು ಪೋಷಿಸುವುದು ಹಿನ್ನಡೆಗೆ ಕಾರಣವಾಗುತ್ತದೆ ಎಂಬ ಭಾವನೆಯೂ ಬಲವಾಗಿಯೇ ಇವೆ. ಈ ಎಲ್ಲದರ ಮಧ್ಯವೂ ಎರಡನೇ ಬಾರಿ ಗರ್ಭಿಣಿಯಾಗುವ, ಮಕ್ಕಳನ್ನು ಹೆರುವವರ ಸಂಖ್ಯೆ ಗಣನೀಯವಾಗಿಯೇ ಇದೆ. ಇವರಲ್ಲಿ ಬಹುತೇಕರಿಗೆ ಎರಡನೇ ಮಗು ಬಯಸಿ ಪಡೆದುದಾಗಿರುವುದಿಲ್ಲ. 'ಆಕಸ್ಮಿಕ'ವೇ ಆಗಿರುತ್ತದೆ. ಹೀಗೆ ಅನಪೇಕ್ಷಿತ ಗರ್ಭಧಾರಣೆ ಎನ್ನುವುದು ಗಮನಾರ್ಹ ಸಮಸ್ಯೆ ಎನ್ನುವ ಮಟ್ಟಿಗೆ ಬೆಳೆದಿದೆ ಎನ್ನುವುದನ್ನು 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ'ಯ ವರದಿಯೂ ದೃಢಪಡಿಸಿದೆ.

'ಎರಡನೇ ಮಗು ಬೇಡ ಎಂದು ನಿರ್ಧರಿಸುವ ದಂಪತಿಗಳು ಸಾಕಷ್ಟು ಹೆಚ್ಚಾಗಿದ್ದಾರೆ. ಅದಕ್ಕೆ ಕಾರಣಗಳೂ ಸಾಕಷ್ಟಿವೆ. ಯಾವುದೋ ಒಂದು ಕಾರಣ ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಮಗುವನ್ನು ಬೆಳೆಸುವ ಸಮಯ, ಅದಕ್ಕೆ ಕೊಡಬೇಕಾದ ಗಮನ, ಮಕ್ಕಳ ವಿದ್ಯಾಭ್ಯಾಸ, ಜೀವನವೆಚ್ಚದ ಕಾರಣಕ್ಕೂ ಒಂದು ಮಗು ಸಾಕು ಎಂದು ನಿರ್ಧರಿಸುವವರು ಸಾಕಷ್ಟಿದ್ದಾರೆ' ಎನ್ನುತ್ತಾರೆ 'ಮಣಿಪಾಲ್ ಹಾಸ್ಪಿಟಲ್ಸ್'ನಲ್ಲಿ ಸ್ತ್ರೀರೋಗ ತಜ್ಞೆಯಾಗಿರುವ ಡಾ. ಸೌಭಾಗ್ಯ.

ಎರಡನೇ ಮಗು ಬೇಡ ಎಂದು ನಿರ್ಧರಿಸಲು ಏನು ಕಾರಣ ಎಂದು ನಿರ್ದಿಷ್ಟವಾಗಿ ಹೇಳುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಅನಪೇಕ್ಷಿತ ಗರ್ಭಧಾರಣೆಗೆ ನಿರ್ದಿಷ್ಟವಾದ ಕಾರಣ ಹುಡುಕುವುದೂ ಕಷ್ಟ ಎನ್ನುತ್ತಾರೆ ಸೌಭಾಗ್ಯ. 'ಈಗ ಎಲ್ಲರಿಗೂ ಗರ್ಭಧಾರಣೆಯ ಬಗ್ಗೆ ಸಾಕಷ್ಟು ತಿಳಿವಳಿಕೆ ಇರುತ್ತದೆ. ವೈದ್ಯರನ್ನು ಸಂಪರ್ಕಿಸುವುದರಿಂದಷ್ಟೇ ಅಲ್ಲದೆ, ಗೂಗಲ್ ಮಾಡಿ ಬೇಕಾದರೂ ಮಾಹಿತಿ ಪಡೆದುಕೊಳ್ಳುತ್ತಾರೆ. ಆದರೂ ಅನಪೇಕ್ಷಿತ ಗರ್ಭದಾರಣೆಗಳು ಸಂಭವಿಸುತ್ತವೆ' ಎನ್ನುವ ಅವರು, 'ಹೆಚ್ಚಿನ ಜನರು ಅನಪೇಕ್ಷಿತ ಗರ್ಭಧಾರಣೆಯನ್ನು ನಿವಾರಿಸಿಕೊಳ್ಳುತ್ತಾರೆ. ಕೆಲವರು, ಪ್ರೆಗ್ನೆಂಟ್ ಆಗಿಯಾಗಿದೆ, ಈ ಮಗು ಹುಟ್ಟಿದ ಮೇಲೆ ಏನಾದರೂ ಶಾಶ್ವತ ಪರಿಣಾಮ ಹುಡುಕಿಕೊಂಡರಾಯ್ತು ಎಂದುಕೊಳ್ಳುತ್ತಾರೆ' ಎಂದು ಅವರು ತಮ್ಮ ವೃತ್ತಿಜೀವನದ ಅನುಭವದ ಆಧಾರದಲ್ಲಿಯೇ ವಿವರಿಸುತ್ತಾರೆ. 'ಅನಪೇಕ್ಷಿತ ಗರ್ಭಧಾರಣೆಯಾಗಿ ನಂತರ ಗರ್ಭ ತೆಗೆದುಕೊಳ್ಳುವುದು ಅಥವಾ ಮಕ್ಕಳನ್ನು ಮಾಡಿಕೊಂಡು ನಂತರ ಕಷ್ಟಪಡುವುದಕ್ಕಿಂತ ಮಗು ಬೇಕೇ ಬೇಡವೇ ಎಂದು ಮೊದಲೇ ನಿರ್ಧರಿಸುವುದು ಒಳ್ಳೆಯದು. ಮಗು ಬೇಡ ಎಂದಾದಲ್ಲಿ, ಗರ್ಭಧಾರಣೆ ತಡೆಯಲು ಹಲವು ಆಧುನಿಕ ವಿಧಾನಗಳು ಇವೆ. ಅವುಗಳ ಬಗ್ಗೆ ತಿಳಿದುಕೊಂಡು ಅಳವಡಿಸಿಕೊಳ್ಳಬೇಕು' ಎಂಬುದು ಅವರ ಸಲಹೆ.

## ಹೀಗೊಂದು ಪ್ರಶ್ನೋತ್ತರ

ಫೇಸ್‌ಬುಕ್‌ನಲ್ಲಿ 'ಪೇರೆಂಟ್ರೀ' ಎಂಬ ಸಾಮುದಾಯಿಕ ವೇದಿಕೆಯೊಂದಿದೆ. ಮಕ್ಕಳನ್ನು ಬೆಳೆಸುವ ಕುರಿತಾದ ಮಾಹಿತಿಗಳನ್ನು ಒದಗಿಸುವುದು ಮತ್ತು ಅನುಭವ–ಅಭಿಪ್ರಾಯಗಳನ್ನು ಹಂಚಿಕೊಳ್ಳಲು, ಅನುಮಾನಗಳನ್ನು ಪರಿಹರಿಸಿಕೊಳ್ಳಲು ಇರುವಂಥ ವೇದಿಕೆ ಅದು. ಗರ್ಭಧಾರಣೆಯಿಂದ ಹಿಡಿದು ಮಕ್ಕಳ ಆರೋಗ್ಯ, ಶಿಕ್ಷಣ, ಶಾಲೆಗಳ



# ಗಂಡಸರು ಏನಂತಾರೆ?

ನಾನು ಮತ್ತು ನನ್ನ ಹೆಂಡತಿ ಇಬ್ಬರೂ ಅಕ್ಕ, ತಂಗಿ, ಅಣ್ಣ, ತಮ್ಮಂದಿರ ಜೊತೆ ಬೆಳೆದವರು. ಆದ್ದರಿಂದ ನಮಗೆ ಎರಡು ಮಕ್ಕಳಿರಲಿ ಎಂಬ ಆಲೋಚನೆಯನ್ನು ಮೊದಲೇ ಮಾಡಿದ್ದೆವು.

**-ಸಂತೋಷ್ ಎಲ್. ಎಂ.**
ಎಂಜಿನಿಯರ್, ಬೆಂಗಳೂರು

ಎರಡು ಮಕ್ಕಳು ಬೇಕೆಂಬ ನಿರ್ಧಾರವನ್ನು ಮೊದಲು ಮಾಡಿರಲಿಲ್ಲ. ಮೊದಲ ಮಗುವಾದ ನಂತರ ಅವಳಿಗೆ ಮನೆಯಲ್ಲೇ ಒಬ್ಬ ಗೆಳೆಯ/ಗೆಳತಿ ಇದ್ದರೆ ಒಳ್ಳೆಯದು ಅನ್ನೋ ಚಿಂತನೆ ಬಂತು. ಮುಂದೆ ಜೀವನದಲ್ಲಿ ಮಗುವಿಗೆ ಸಾಕಷ್ಟು ಸ್ನೇಹಿತರು ಸಿಗಬಹುದು. ಆದರೆ ಎಲ್ಲಾ ರೀತಿಯಲ್ಲೂ ಜೊತೆ ನಿಲ್ಲಲು ರಕ್ತಸಂಬಂಧಿ ಅವಶ್ಯಕತೆ ಇದೆ ಅನ್ನಿಸಿತು. ಆದ್ದರಿಂದ ಎರಡನೇ ಮಗುವಾಯಿತು.

**-ಕವಿರಾಜ್**
ಚಿತ್ರ ಸಾಹಿತಿ ಮತ್ತು ನಿರ್ದೇಶಕರು

ನಾವು ಆರ್ಥಿಕವಾಗಿ ಸಬಲರಾಗಿಲ್ಲ. ಮಕ್ಕಳು ಬೇಡ ಎಂದೇ ನಿರ್ಧರಿಸಿದ್ದೆವು. ಆಕಸ್ಮಿಕವಾಗಿ ಮಗಳು ಹುಟ್ಟಿದಳು. ಮೊದಲನೇ ಮಗುವಿನ ಸಂತೋಷ ನಮ್ಮನ್ನು ಎರಡನೇ ಮಗು ಮಾಡಿಕೊಳ್ಳುವಂತೆ ಮಾಡಿತು. ಮಕ್ಕಳು ಒಬ್ಬಂಟಿಗರಾಗಿ ಬೆಳೆಯಬಾರದು ಎಂಬುದು ನಮ್ಮ ನಿಲುವಾಗಿತ್ತು.

**-ಹರೀಶ್ ಗಂಗಾಧರ**
ಇಂಗ್ಲಿಷ್ ಪ್ರಾಧ್ಯಾಪಕರು, ಚನ್ನಪಟ್ಟಣ